ಹುಕ್ಕೇರಿ ತಾಲ್ಲೂಕಿನ ದಡ್ಡಿ -ನಾಗನೂರು ಏತ ನೀರಾವರಿ ಯೋಜನೆ

1624(2135) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ದಡ್ಡಿ-ನಾಗನೂರ ಏತ ನೀರಾವರಿ ಯೋಜನೆಗೆ ಒದಗಿಸಿರುವ ಹಣವೆಷ್ಟು?

ಆ) ಕಾಮಗಾರಿಯನ್ನು ಪ್ರಾರಂಭಿಸದಿರಲು ಕಾರಣಗಳೇನು?

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ದಡ್ಡಿ ನಾಗನೂರು ಏತ ನೀರಾವರಿ ಯೋಜನೆಗೆ 2002-03ನೇ ಸಾಲಿನಲ್ಲಿ ಒಟ್ಟು ರೂ. 724.97 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಆ) ದಡ್ಡಿ ನಾಗನೂರು ಏತ ನೀರಾವರಿ ಯೋಜನೆಯ ಮೊದಲನೇ ಹಂತದ ಕಾಮಗಾರಿಗಳನ್ನು 1995-96ರ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಸದರಿ ಏತ ನೀರಾವರಿ ಯೋಜನೆಯ ಇತ್ತೀಚಿನ ಹಂತದ ಪ್ರಗತಿ ಈ ಕೆಳಗಿನಂತಿದೆ:-

ಮೊದಲನೇ ಹಂತದ ಕಾಮಗಾರಿಗಳಾದ ಜಾಕ್‌ವೆಲ್, ಸ್ವಿಚ್‌ಗೇರ್, ರೂಂ ಮತ್ತು ಪಂಪ್‌ಹೌಸ್ ಪೂರ್ಣಗೊಂಡಿದೆ. ಪಂಪಿಂಗ್ ಮೆಶಿನರಿ ಸಾಮಗ್ರಿಗಳನ್ನು ಪೂರೈಸಲಾಗಿದ್ದು ಅಳವಡಿಸುವ ಕೆಲಸವು ಪ್ರಗತಿಯಲ್ಲಿದೆ. ರೈಸಿಂಗ್‌ಮೇನ್ ಮುಗಿಯುವ ಹಂತದಲ್ಲಿದೆ. ಸದರಿ ಯೋಜನೆಯ ಕಾಲುವೆ ಉದ್ದ 13 ಕಿ.ಮೀ. ಇದ್ದು ಇದರಲ್ಲಿ 6 ಕಿ.ಮೀ. ಕಾಲುವೆಯ ಕೆಲಸವು ಪೂರ್ಣಗೊಂಡಿದೆ. ಉಳಿದ 7 ಕಿ.ಮೀ. ಕಾಲುವೆಯ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದ್ದು ಮಂಜೂರಾತಿ ಹಂತದಲ್ಲಿದೆ ಇರುತ್ತದೆ. ಹಾಗೂ ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಕೆ.ಪಿ.ಟಿ.ಸಿ.ಎಲ್. ಇವರಿಂದ ಮಂಜೂರಾತಿ ದೊರೆತಿದೆ. ಈ ಯೋಜನೆಯ 2ನೇ ಹಂತದ ಕೆಲಸಗಳಾದ ಅಪ್ರೋಚ್ ಕಾಲುವೆ, ಪಂಪ್‌ಹೌಸ್, ಪಂಪಿಂಗ್, ಮೆಶಿನರಿ, ರೈಸಿಂಗ್‌ಮೇನ್ ಮತ್ತು ಡೆಲಿವರಿ ಛೇಂಬರ್ ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸದರಿ ಯೋಜನೆಗೆ ಜನವರಿ 2003ರ ವರೆಗೆ ರೂ. 403.10 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಇ) ಈ ಯೋಜನೆಯ ಮೊದಲನೆಯ ಹಂತದ ಕಾಮಗಾರಿಯು 1995-96 ರಲ್ಲೇ. ಪ್ರಾರಂಭಗೊಂಡಿದ್ದು ಮುಗಿಯುವ ಹಂತದಲ್ಲಿದೆ. ಎರಡನೇ ಹಂತದ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡ ಕೂಡಲೇ ಪ್ರಾರಂಭಿಸಲಾಗುವುದು. ಈ ಯೋಜನೆಯನ್ನು ಡಿಸೆಂಬರ್ 2004 ರೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿರುತ್ತದೆ.

ಸಹಕಾರ ಸಂಘಗಳಿಗೆ ಹೆಚ್ಚುವರಿ ಆಡಿಟ್ ಶುಲ್ಕ

1625(2332) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಸಹಕಾರ ಸಂಘಗಳಿಗೆ ಆಡಿಟ್ ಶುಲ್ಕವನ್ನು ಶೇಕಡಾ 7.5 ರಿಂದ ಶೇಕಡಾ 10ಕ್ಕೆ ಏರಿಸಿದ್ದರಿಂದ ಸಹಕಾರ ಸಂಘಗಳಿಗೆ ಬಹುದೊಡ್ಡ ಹೊರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?